ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 17–10–2018**

ಪತ್ರಿಕಾ ಆಮಂತ್ರಣ

1. ನವೀಕೃತ ಹೊರಾಂಗಣ ಬಾಸ್ಕೆಟ್‌ಬಾಲ್ ಕ್ರೀಡಾ ಅಂಕಣ ಉದ್ಘಾಟನೆ ಮತ್ತು ಉನ್ನತೀಕರಿಸಿದ ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಕ್ರೀಡಾ ಅಂಕಣ ಲೋಕಾರ್ಪಣೆ:

   ಉದ್ಘಾಟನೆ:

   ಡಾ. ಜಿ. ಪರಮೇಶ್ವರ್

   ಉಪ ಮುಖ್ಯಮಂತ್ರಿಗಳು ಹಾಗೂ ಗೃಹ, ಬೆಂಗಳೂರು ನಗರಾಭಿವೃದ್ಧಿ ಹಾಗೂ

   ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

   ದಿನಾಂಕ: 20–10–2018 ಶನಿವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ.

   ಸ್ಥಳ: ಶ್ರೀ ಕಂಠೀರವ ಕ್ರೀಡಾಂಗಣ, ಬೆಂಗಳೂರು

2. ಕನ್ನಡ ಮತ್ತು ಸಂಸ್ಕೃತಿ ಇಲಾಖಾವತಿಯಿಂದ
   " ಮನೆಯಂಗಳದಲ್ಲಿ ಮಾತುಕತೆ " ಕಾರ್ಯಕ್ರಮ

   ತಿಂಗಳ ಅತಿಥಿ:

   ಡಾ ವಿಜಯಲಕ್ಷ್ಮಿ ದೇಶಮಾನೆ, ಕ್ಯಾನ್ಸರ್ ತಜ್ಞರು,

   ದಿನಾಂಕ: 20–10–2018 ಶನಿವಾರ ಸಮಯ: ಸಂಜೆ 4.00 ಗಂಟೆಗೆ

   ಸ್ಥಳ: ನಯನ ಸಭಾಂಗಣ,
   ಕನ್ನಡ ಭವನ, ಜಯ ಚಾಮರಾಜೇಂದ್ರ ರಸ್ತೆ,
   ಬೆಂಗಳೂರು.

**ಪತ್ರಿಕಾ ಪ್ರಕಟಣೆ**

**ಸಂಖ್ಯೆ:1172/1272**

## ಗಡಾದ್ ಪ್ರಕರಣ : ಒಂದು ಸ್ಪಷ್ಟೀಕರಣ

**ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ) :**

ಶ್ರೀ ಭೀಮಪ್ಪ ಗುಂಡಪ್ಪ ಗಡಾದ ಎಂಬ ಸಾರ್ವಜನಿಕರೊಬ್ಬರ ದಿ: 08.10.2018ರ ಪತ್ರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ದಿನಾಂಕ: 16.10.2018 ಮತ್ತು 17.10.2018 ರಂದು ವರದಿಯಾಗಿರುವುದಕ್ಕೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ಸರ್ಕಾರದ ಮುಖ್ಯಕಾರ್ಯದರ್ಶಿಯವರ ಕಛೇರಿಯಲ್ಲಿ ಸ್ವೀಕೃತಗೊಳ್ಳುವ ಸಾರ್ವಜನಿಕರ ಅರ್ಜಿ/ಪತ್ರಗಳಲ್ಲಿನ ವಿಷಯಕ್ಕೆ ಸಂಬಂಧಿತ ಇಲಾಖೆಗಳಿಗೆ ಈ ಮನವಿಗಳ ಮೇಲೆ ನಿಯಮಾನುಸಾರ/ ಕಾನೂನು ರೀತ್ಯ ಪರಿಶೀಲಿಸಿ ಸೂಕ್ತ ಕ್ರಮಕ್ಕೆಂದು ತಿಳಿಸಿ ವರ್ಗಾಯಿಸಿ, ಅರ್ಜಿದಾರರಿಗೂ ಸ್ವೀಕೃತಿಯನ್ನು ವಾಡಿಕೆಯಾಗಿ ನೀಡಲಾಗುತ್ತಿದೆ. ಇಂತಹ ಪತ್ರಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆ ತೀರ್ಮಾನಕ್ಕಾಗಿ ಕಡತದಲ್ಲಿ ಸಲ್ಲಿಸುತ್ತದೆ.

ಇಂತಹುದೇ ಮೇಲಿನ ಅರ್ಜಿದಾರರವರ ದಿ: 08.10.2018ರ ಪತ್ರವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪತ್ರ ಸಂಖ್ಯೆ: ಮುಕಾ/10847/2018, ದಿ:10.10.2018 ರಲ್ಲಿ ವಾಡಿಕೆಯಂತೆ ಮುಖ್ಯಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು ಸೂಕ್ತ ಕ್ರಮಕ್ಕಾಗಿ ಕಳುಹಿಸಿರುವುದನ್ನು, ಅರ್ಜಿದಾರರಿಗೂ ತಿಳಿಸಲಾಗಿರುತ್ತದೆ. ಈ ಪತ್ರಕ್ಕೆ ಪ್ರತ್ಯೇಕ ವಿಶೇಷತೆ ಇರುವುದಿಲ್ಲ. ಸದರಿ ಪತ್ರದ ಮೇಲೆ ಕಡತ ಸಲ್ಲಿಕೆಯಾಗಲಿ, ಕ್ರಮವಾಗಲಿ ಅಥವಾ ತೀರ್ಮಾನವಾಗಲಿ ಜರುಗಿಸಿರುವುದಿಲ್ಲ. ಆದರೆ, ಇಂತಹ ಸೂಕ್ಷ್ಮ ಪತ್ರಗಳಿಗೆ ಹೆಚ್ಚು ಗಮನ ನೀಡಿ ಮಾಹಿತಿಯನ್ನು ಎಚ್ಚರಿಕೆಯಿಂದ ನೀಡಬೇಕೆಂದು ಆಪ್ತ ಕಾರ್ಯದರ್ಶಿಗೆ ಸೂಚಿಸಲಾಗಿದೆ.

**PRESS RELEASE**

## GADAD EPISODE : A CLARIFICATION

**Bengaluru, October 17 ( Karnataka Information ) :**

Clarification is given as under to the media reports dated: 16.10.2018 & 17.10.2018 regarding letter of one Sri. Bheemappa Gundappa Gadaadh.

The letters and applications received from the public in the Office of the Chief Secretary are, as a matter of routine practice sent to the departments concerned dealing with subjects, to take necessary action as per rules. Acknowledgement is also given to the concerned applicant. The department concerned examines the letter and submits it on file for decision.

One such letter by the above applicant dated: 08.10.2018 was received in Chief Secretary's office and was sent to DPAR vide letter no. CSO/10847/2018, dated: 10.10.2018 for necessary action by the Private Secretary to Chief Secretary as per the usual practice. The same was communicated to the applicant. There is nothing out of the ordinary in the communication given to the applicant. It is clarified that, no file has been submitted, neither action nor any decision has been taken on this letter. However, the Private Secretary has been directed to give more attention to issue of such sensitive letters.

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಅಕ್ಟೋಬರ್ 17, (ಕರ್ನಾಟಕ ವಾರ್ತೆ) :**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 21–10–2018** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.
2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.